ಜರ–ಜರನೆಂದು ಸುರಿದ ಮಳೆ ಹನಿಗಳು ಕ್ರಮೇಣ ದಪ್ಪವಾಗಿ ಹನಿಯಲಾರಂಭಿಸಿದಂತೇ 'ಶಾಹನಾ' ಎಂದು ಕೈಯಲ್ಲಿ ಒಗೆದು ಹಿಂಡಿದ ಬಟ್ಟೆಗಳ ಬಕೆಟನ್ನೂ ಇನ್ನೊಂದು ಕೈಯಿಂದ ಭುಜದ ಮೇಲಿದ್ದ ದುಪ್ಪಟ್ಟಾವನ್ನು ತಲೆತುಂಬ ಹೊದ್ದುಕೊಳ್ಳುತ್ತ ಓಡುನಡಿಗೆಯಲ್ಲಿ ಮನೆಯ ಅಂಗಳ ತಲುಪಿದಳು.

"ಉಮ್ಮಾ, ಎಂಥ ಥಂಡಿ ಮಳೆ!"

ಪಡಸಾಲೆಯಲ್ಲಿ ದಪ್ಪ ಕಂಬಕ್ಕೆ ಒರಗಿ ಕುಳಿತು ತಲೆಕೂದಲಲ್ಲಿ ಬಾಚಣಿಕೆ ಆಡಿಸುತ್ತಿದ್ದ ಶಾಹೆನಾಳ ಉಮ್ಮ, ಮಳೆಯಲ್ಲೇ ತೊಯ್ಯುತ್ತಿದ್ದ ಮಗಳನ್ನು "ಮಳೇಲಿ ನೆನೀತಾ ಅಲ್ಯಾಕಿದ್ದೀಯೇ, ಒಳಗೆ ಬರಬಾರದಾ ಮಗಳೇ" ಎಂದು ಧಾವಂತದಲ್ಲಿ ಕೂಗಿಕೊಂಡರೂ ಶಾಹೆನಾ "ಹ್ಞೂಂ ಉಮ್ಮಾ, ಬರ್‍ತಾ ಇದ್ದೇನೆ. ಈ ಮಳೆಯೇನು ಈಗ ಬರುತ್ತೆ ಈಗ ಹೋಗುತ್ತೆ. ನಮ್ಮ ಗಿಡ ನೋಡು..." ಎಂದು ಮತ್ತಷ್ಟು ಉತ್ಸಾಹದಿಂದ ಈಗ ತಾನೇ ಚಿಗುರುತ್ತಿದ್ದ ಗಿಡಗಳ ಪಾತಿ ಸರಿಪಡಿಸುವಾಗ ಅವಳು ಇಷ್ಟು ಬೇಗ ಒಳಕ್ಕೆ ಬರುವುದಿಲ್ಲವೆಂಬುದು ಖಾತ್ರಿ ಆಗಿ ಅವಳ ಉಮ್ಮ ಸುಮ್ಮನೇ ಒಳ ನಡೆದಿದ್ದಳು.

ಅವಳೆಂದಂತೆ ಕೆಲ ಹೊತ್ತಲ್ಲೇ ಮಳೆ ಪೂರ್ತಿ ನಿಂತು, ಎಳೆ ಬಿಸಿಲು ಮೂಡಿತ್ತು. ಶಾಹೆನಾ ಕೆಲಸದ ಹುಡುಗ ಹಮೀದನೊಂದಿಗೆ ಎಲ್ಲೆಲ್ಲೋ ಅಲೆದು, ತಂದು ಕೈಯಾರೆ ನೆಟ್ಟು, ನೀರೆರೆದ ಗಿಡ, ಮರಗಳವು. ತಾನೇ ಬಾವಿಯಿಂದ ನೀರು ಸೇದಿ ಹಾಕುತ್ತಿದ್ದಳು. ಪ್ರತಿ ಮುಂಜಾನೆ ಹಮೀದ ನೀರನ್ನು ಒರಟೊರಟಾಗಿ ಚೆಲ್ಲಿಬಿಡುತ್ತಾನೆ ಎಂಬುದು ಶಾಹೆನಾಳ ಅನಿಸಿಕೆ.

"ಅವ ನೀರಲ್ಲಿ ನನ್ನ ಗಿಡಗಳನ್ನೆಲ್ಲ ತೇಲಿಸಿ ಹಾಕ್ಬಿಡ್ತಾನಷ್ಟೇ ಅಬ್ಬಾ... ಅವ ಇಂಥ ಕೆಲ್ಸಕ್ಕೆಲ್ಲ ಉಪಯೋಗವಿಲ್ಲ."

"ಹಮೀದನಿಗೆ ಹೇಳಿದ್ರೆ ನೀರು ಸೇದಿ ಹಾಕ್ತಾನೆ ಬೇಟಿ ನೀನ್ಯಾಕೆ ಸುಮ್ನೇ ಕೆಲ್ಸ ಹಚ್ಚಿಕೊಳ್ತೀಯಾ" ಎನ್ನುತ್ತಿದ್ದ ಅಬ್ಬುವಿಗೆ ಶಾಹೆನಾಳ ಸಮಜಾಯಿಷಿ ಇದು.

ಅದಕ್ಕೆ ಅಬ್ಬು ನಗುತ್ತ ಹಮೀದನ ಕಿವಿ ಎಳೆದಾರು.

"ಏ ಹಮೀದೇ ಹೌದಾ ನೀನು ಉಪಯೋಗ ಇಲ್ಲದವನಾ?" ಎಂದು.

ಛಂಗನೆ ಹಾರಿ ಕಿವಿ ಬಿಡಿಸಿಕೊಳ್ಳುವ ಹಮೀದ ಶಾಹೆನಾಳ ಮುಂದೆ ಸೊಂಟಕ್ಕೆ ಕೈಯಿಟ್ಟು ನಿಂತಾನು.

"ಹೌದಾ ಶಾಹೆನಾಕ್ಕಾ... ನಾನೆಂದಾದರೂ ಯಾವ ಕೆಲಸವಾದ್ರೂ ಹಾಳು ಮಾಡಿದ್ದುಂಟಾ... ನೀವು ನನ್ನ ಬಗ್ಗೆ ಹೀಗೆ ಹೇಳಬಹುದಾ?"

ಶಾಹೆನಾ ಅಷ್ಟರೊಳಗೆ ಮನೆಯೊಳಗೆ ಚಿಮ್ಮಿಬಿಡುತ್ತಾಳೆ.

"ಹೌದು ಹಮೀದೇ ಹೌದು. ನೀನು ಕೆಲಸಕ್ಕೆ ಬಾರದವನೇ" ಎಂದು ಹೊರ ರೂಮಿನ ಕಿಟಕಿಯ ಸರಳಿಗೆ ಕೈ ಹಿಡಿದು ನಿಂತು ನಾಲಿಗೆ ಚಾಚಿ ಹಂಗಿಸಿಯಾಳು.

ಈಗ ಮಾತ್ರ ಹಮೀದನಿಗೆ ಸುಳ್ಳು ಸುಳ್ಳೇ ಕೋಪ ನಟಿಸಲೂ ಮರೆತುಹೋಗುತ್ತದೆ. ಶಾಹೆನಕ್ಕಳ ಬಿಳಿ ಬಿಳಿ ಕೆನ್ನೆಗಳಲ್ಲಿ ಬೀಳುವ ಗುಳಿಗಳನ್ನು ನಾಲಿಗೆ ಚಾಚಿ ಅಣಕಿಸುವಾಗ ಪುಟ್ಟ ಮಗುವಂತೆ ತೋರುವ ಅವಳ ಮುಗ್ಧ ಭಾವಗಳೂ ಅವನನ್ನು ವಿಸ್ಮಯಗೊಳಿಸುತ್ತದೆ ಪ್ರತಿ ಬಾರಿ. ಎಂಥ ಚಂದದವಳು ನಮ್ಮ ಶಾಹೆನಕ್ಕ! ಅಲ್ಲಾಹು ಅವಳನ್ನು ಬಹಳ ಪ್ರೀತಿಯಿಂದ ಸೃಷ್ಟಿಸಿದ್ದಿರಬೇಕು... ಎಂದು ಹಮೀದ ಅಂದುಕೊಳ್ಳುತ್ತಿರುತ್ತಾನೆ.

ಶಾಹೆನಾ ಆ ಮನೆಯ ಜೀವ, ಅಬ್ಬು–ಅಮ್ಮಿಯ ಏಕ ಮಾತ್ರ ಹೆಣ್ಣು ಸಂತಾನ.

ಅದೊಂದು ದಿನ ಶಾಹೆನಾ ತನ್ನಣ್ಣ ಸಜೀದ್ ದುಬೈಯಿಂದ ಮುದ್ದಿನ ತಂಗಿಗಾಗಿ ಕಳಿಸಿದ್ದ ಅಚ್ಚ ಬಿಳಿಯ ಸಿಲ್ಕಿನ ಸೀರೆಗೆ ಗುಲಾಬಿ ರವಿಕೆ ತೊಟ್ಟು ಕೂದಲಿಗೆ ಒಂದು ಗಂಟು ಹಾಕಿ, ಕನ್ನಡಿಯಲ್ಲಿ ತನ್ನ